ಓ.ಎಲ್. ನಾಗಭೂಷಣ ಸ್ವಾಮಿ

# ಸಂಬಂಧಗಳ ಸೂಕ್ಷ್ಮ ಉತ್ಖನನ

'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಬೇರೆ ಬೇರೆ ಓದುಗರು ಹೊಸ ಕನ್ನಡ ಪುಸ್ತಕಗಳ ಬಗ್ಗೆ ಬರೆಯಲಿದ್ದಾರೆ.

ಕನ್ನಡದ ಪ್ರಮುಖ ಕಥೆಗಾರರಾದ ಸುಮಂಗಲಾ ಅವರ ಮೊದಲ ಕಾದಂಬರಿ 'ಅಗೆದಷ್ಟೂ ನಕ್ಷತ್ರ,' ಮನಸ್ಸು ತುಂಬುವಂಥ ಕೃತಿ. ಈ ಕಾದಂಬರಿ ಕಥೆ ಹೇಳುತ್ತದೆ ನಿಜ; ಆದರೆ ಮುಂದೇನು ಅನ್ನುವ ಕುತೂಹಲ ಮಾತ್ರವಲ್ಲ, ಏನು ನಡೆಯಿತೋ ಅದು ಯಾಕೆ ನಡೆಯಿತು ಅನ್ನುವುದನ್ನು ಸುತ್ತಲ ಲೋಕದ, ಪಾತ್ರಗಳ ಅಂತರಂಗದ ನೋಟದ ಮೂಲಕ ಕಾದಂಬರಿ ತೋರುತ್ತದಲ್ಲ, ಹೇಳುತ್ತದಲ್ಲ ಅದು ಮುಖ್ಯವಾಗುತ್ತದೆ. ಕತೆಯ ರುಚಿ, ಕತೆಗೆ ಕಾರಣವಾದ ಲೋಕ, ಮನೋಲೋಕದ ಸಮೃದ್ಧಿ ಎರಡೂ ಈ ಕಾದಂಬರಿಯಲ್ಲಿವೆ.

ಕಾದಂಬರಿಯ ಕಥೆಯಲ್ಲಿ ಹಲವು ಪದರಗಳಿವೆ: ಧೊಲಾವೀರದಲ್ಲಿ ನಡೆದ ಉತ್ಖನನ ಸದ್ಯದ ವರ್ತಮಾನದಲ್ಲಿ ನಡೆಯುವ ಕಥೆ. ಈ ಪದರವನ್ನು ಒಂದಿಷ್ಟು ಬಿಡಿಸಿದರೆ ಉತ್ಖನನದಲ್ಲಿ ಪಾಲ್ಗೊಂಡ ನಾಯಕ ಪಾತ್ರ ಮಹಿ ಮತ್ತು ಅವನ ಆತ್ಮೀಯರ ಸಂಬಂಧಗಳ ಉತ್ಖನನದ ಕಥೆಯೂ ಇದೆ. ಮಂಡ್ಯ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಐದು ರೈತ ಕುಟುಂಬಗಳ ಬಗ್ಗೆ ಆತ್ಮೀಯಳಾದ ನೀತು ಬರೆಯುವ ಪತ್ರಗಳ ಮೂಲಕವೂ, ತನ್ನದೇ ನೆನಪುಗಳ ಮೂಲಕವೂ ಮಹಿ ಪಡೆಯುವ ಬದುಕಿನ ಒಳನೋಟದ ಕಥೆ.

ಪ್ರಾಚೀನ ಬದುಕಿನ ಸಾಕ್ಷಿಗೆ ಉತ್ಖನನ ನಡೆದ ಹಾಗೇ ಸಂಬಂಧಗಳ ಸೂಕ್ಷ್ಮವನ್ನು ಅರಿಯುವುದಕ್ಕೆ ಭಾಷೆಯ ಉತ್ಖನನವೂ ನಡೆಯುತ್ತದೆ. ತನ್ನೊಳಗೇ ಆಡುವ ಮಾತು, ಆಡಬೇಕಾದವರೊಡನೆ ಆಡದಿದ್ದ ಮಾತು, ಆಡಿದರೂ ಇನ್ನೇನೋ ಆಡಬೇಕಾಗಿದ್ದ ಮಾತು, ಮುಖಾಮುಖಿ ಮಾತು, ಫೋನಿನ ಮಾತು, ಬರವಣಿಗೆಯ ರೂಪದ ಮಾತು ಇವೆಲ್ಲ ಬಳಕೆಯಾಗಿವೆ. ಅರಿಯುವುದಕ್ಕಾಗಿ ಬಗೆಯಲು ಇರುವುದು ಭಾಷೆ ಮಾತ್ರವೇ ಅಲ್ಲವೇ! 'ಇರುವ ವಾಸ್ತವವನ್ನು ಇರುವ ಹಾಗೆ ನೋಡಿ, ನಿಮ್ಮದೇ ಬಣ್ಣ ಕಟ್ಟಬೇಡಿ' ಅನ್ನುವಂಥ ಮಾತನ್ನು ಮಹಿಯ ಮಾರ್ಗದರ್ಶಕ